# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ : 891 (1041)
ಸದಸ್ಯರ ಹೆಸರು : ಶ್ರೀ ಎಸ್.ರವಿ
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 28.12.2022
ಉತ್ತರಿಸುವ ಸಚಿವರು : ವಸತಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯಿಂದ ಸರ್ಕಾರವು ಜಾರಿಗೊಳಿಸುತ್ತಿರುವ ಯೋಜನೆಗಳು ಯಾವುವು; ಈ ಯೋಜನೆಗಳ ಮಾನದಂಡಗಳೇನು; (ವಿವರ ನೀಡುವುದು) | ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಯೋಜನೆಗಳು ಕೆಳಕಂಡಂತಿವೆ.<br>1. ರಾಜ್ಯದಲ್ಲಿ ಒಟ್ಟು 09 ನೂತನ ರೈಲು ಮಾರ್ಗ ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದೆ **(ವಿವರಗಳು ಅನುಬಂಧ-1).**<br>2. ರಾಜ್ಯದಲ್ಲಿ 34 ಮೇಲ್ಸುತುವೆ / ಕೆಳಸೇತುವೆ ಯೋಜನೆಗಳು ಪ್ರಗತಿಯಲ್ಲಿವೆ. **(ವಿವರಗಳು ಅನುಬಂಧ -2)**<br>3. ರಾಜ್ಯದಲ್ಲಿ ಪ್ರಗತಿಯಲ್ಲಿರುವ ವಿಮಾನ ನಿಲ್ದಾಣ, ಹೆಲಿಪ್ಯಾಡ್, ವಾಟರ್ ಏರೋಡ್ರೋಮ್ಸ್ ತದಡಿ ಪರಿಸರ ಪ್ರವಾಸೋದ್ಯಮ ಮತ್ತು ಬೆಂಗಳೂರು ಸಿಗ್ನೇಚರ್ ಪಾರ್ಕ್ ಯೋಜನೆಗಳ **ವಿವರಗಳನ್ನು ಅನುಬಂಧ-3ರಲ್ಲಿ ಒದಗಿಸಿದೆ.**<br><br><u>ಯೋಜನೆಗಳ ಮಾನದಂಡಗಳು:</u><br><br>1. ರಾಜ್ಯದ ಮೂಲಸೌಲಭ್ಯ ಅಭಿವೃದ್ಧಿ ಯೋಜನೆಗಳ ಭೂಸ್ವಾಧೀನ ವೆಚ್ಚವನ್ನು ರಾಜ್ಯ ಸರ್ಕಾರವೇ ಭರಿಸುತ್ತಿದೆ.<br>2. ರಾಜ್ಯದ ನೂತನ ರೈಲು ಮಾರ್ಗದ ಯೋಜನೆಗಳ ವೆಚ್ಚವನ್ನು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಕ್ರಮವಾಗಿ ಶೇಕಡ 50:50 ರಂತೆ ಭರಿಸುತ್ತಿವೆ.<br>3. ರೈಲ್ವೇ ಮೇಲ್ಸುತುವೆ / ಕೆಳಸೇತುವೆಗಳನ್ನು ರೈಲ್ವೆ ಇಲಾಖೆಯ ನಿಯಮಾವಳಿಗಳ ಪ್ರಕಾರ ನಿರ್ಮಿಸಲಾಗುತ್ತಿಧೆ.<br>4. ರಾಜ್ಯದಲ್ಲಿನ ವಿಮಾನ ನಿಲ್ದಾಣಗಳನ್ನು ಕೇಂದ್ರ ಸರ್ಕಾರದ MoCA ಗ್ರೀನ್ ಫೀಲ್ಡ್ ಏರ್ ಪೋರ್ಟ್ ಪಾಲಿಸಿಯಲ್ಲಿನ ಮಾನದಂಡಗಳ ಅನುಸಾರ ನಿರ್ಮಿಸಲಾಗುತ್ತಿದೆ. |

| | | |
|---|---|---|
| (ಆ) | ಈ ಯೋಜನೆಗಳಡಿ ಕಳೆದ 3 ವರ್ಷಗಳಲ್ಲಿ ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳಿಗೆ ಬಿಡುಗಡೆ ಮಾಡಿದ ಅನುದಾನವೆಷ್ಟು; ಈ ಅನುದಾನದಲ್ಲಿ ಕೈಗೊಂಡಿರುವ ಕಾಮಗಾರಿಗಳು ಯಾವುವು; (ಸಂಪೂರ್ಣ ವಿವರ ನೀಡುವುದು) | ಕಳೆದ ಮೂರು ವರ್ಷಗಳಲ್ಲಿ ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳಲ್ಲಿ ಯಾವುದೇ ಯೋಜನೆ / ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ. |
| (ಇ) | ಈ ಯೋಜನೆಗಳ ಸದುಪಯೋಗ ಪಡೆದುಕೊಂಡ ಫಲಾನುಭವಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು) | ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು ಫಲಾನುಭವಿ ಕೇಂದ್ರಿತ ಅಥವಾ ತಾಲ್ಲೂಕುವಾರು ಯೋಜನೆಗಳಾಗಿರುವುದಿಲ್ಲ. |

ಸಂಖ್ಯೆ:ಮೂಅಇ 49 ಯುಐಪಿ 2022

(ವಿ. ಸೋಮಣ್ಣ)
ವಸತಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

| ಅನುಬಂಧ - I | |
|---|---|
| ಕ್ರ.ಸಂ | ನೂತನ ರೈಲು ಮಾರ್ಗ ಯೋಜನೆಗಳು |
| 1 | ಗಿಣಿಗೇರಾ-ರಾಯಚೂರು |
| 2 | ತುಮಕೂರು-ರಾಯದುರ್ಗ |
| 3 | ಚಿಕ್ಕಮಗಳೂರು-ಬೇಲೂರು |
| 4 | ಕುಡಚಿ-ಬಾಗಲಕೋಟೆ |
| 5 | ಗದಗ-ವಾಡಿ |
| 6 | ತುಮಕೂರು-ದಾವಣಗೆರೆ |
| 7 | ಬೇಲೂರು-ಹಾಸನ |
| 8 | ಶಿವಮೊಗ್ಗ-ಶಿಕಾರಿಪುರ-ರಾಣಿಬೆನ್ನೂರು |
| 9 | ಧಾರವಾಡ-ಕಿತ್ತೂರು-ಬೆಳಗಾವಿ |

| ಅನುಬಂಧ - II | | |
|---|---|---|
| Sl.No | Project | LC No |
| 1 | Hubballi -Kusgal ( Hosapete) Section near NH - 63 | 1 |
| 2 | Chittapura. Kalaburagi | 3A |
| 3 | Bangarapete - Mariguppam division near Origham Km. 11/600-700 | 7 |
| 4 | Kengeri - Hejjala | 16 |
| 5 | Rajanukunte - Doddaballapura | 27 |
| 6 | Doddaballapura - Oddarahalli | 32 |
| 7 | Between Beeruru - Talaguppa Km. 43 | 32 |
| 8 | Gadag- Hombal Stations @ Km.56/300-400 | 32 |
| 9 | Bidar | 43 A |
| 10 | Bidar | 45 & 46 |
| 11 | Bengaluru - Mysuru | 47 |
| 12 | Shivamogga | 48 |
| 13 | Bhagyanagar - Koppal | 62 & 64 |
| 14 | Afzalpura Road near Gulabarga | 83 B |
| 15 | Construction of approach road near Mother Theresa School near new Jevargi Road. Kalaburagi. | Bridge No.567/1 |
| 16 | Vajra Hanuman Temple at Vijayapura Town | 80 |
| 17 | Srirangapatna - Naganahalli | 101 |
| 18 | Bellari - Bellari Cantt. 204/700-800 | 110 |
| 19 | Bellari | 111 |
| 20 | Hubballi - Guntakal | 112 |
| 21 | Bellary - Sathyanarayanapet | 114 |
| 22 | Bangarapete - Maralahalli | 116 |
| 23 | Byatarayanahalli - Taykal | 120 |
| 24 | Devanagundi - Hosakote | 129 |
| 25 | Pedal Bajaar Road near Mangalore | 146 B |
| 26 | Davanagere - Harihara Section | KM326/10-327 |
| 27 | Londa - Meeraj | 385 |
| 28 | Yalahanka-Rajanakunte | 21 |
| 29 | Hubballi - Meeraj | 388A |
| 30 | Rayabhag - Chinchili Londa - Miraj Section | 438 |
| 31 | Chinnadagudihundi and Badanaguppe Mysore Chamarajanagara Section | 27 & 47 |
| 32 | Naganahalli Yard | Km 129/900-130/000 |
| 33 | Desur - Belagavi Station, Belagavi | 381 |
| 34 | Byadagi -Motebennur Byadagi Yard, Haveri | 227 |

| | | |
|---|---|---|
| 35 | kuditini yard Between Hospete- Bellary station. | 102 |
| 36 | Hbrhimpura - Vijayaopura stations (Gadag-Hutagi) | 81 |
| 37 | Hassan-Sakleshpur | 03 Km.1/600-700 |
| 38 | Holenarisepura -Mavinekere | 79 |
| 39 | Holenarisepura -Mavinekere | 78 |
| 40 | Tiptur Railway Station | 84 |
| 41 | Koppal -Ginegera | 66 |
| 42 | Bhadravathi-Shimoga | 34 |
| 43 | Shiomga-talaguppa | 49 |
| 44 | Shimoga-Kumsi | 52 |
| 45 | Kyatasandra Station between Bengaluru-Tumkuru Railway | 37 |
| 46 | Construction of ROB in lieu of LC No.297 section between Hubli-Dharwad in Dharwad | 297 |
| 47 | Construction of ROB in lieu of LC No.21 between Rajanagunta - Doddaballpur | 21 |
| 48 | Construction of ROB in lieu of LC No.85 between Hubballi-Ballari section | 85 |
| 49 | Construction of ROB in lieu of LC No.299 between Hubballi-Dharwad | 299 |

ಅನುಬಂಧ - III

# ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಲ್ಲಿ ಕಳೆದ ಮೂರುವರೆ ವರ್ಷದಲ್ಲಿ ಸಾಧಿಸಿರುವ ಸಾಧನೆಗಳ ವಿವರಮಾಹಿತಿ

## ವಿಮಾನ ನಿಲ್ದಾಣ ಶಾಖೆಯ ಮಾಹಿತಿ

### 1. ಕಲಬುರಗಿ ವಿಮಾನ ನಿಲ್ದಾಣ:

ಕಲಬುರಗಿಯಲ್ಲಿ ಸುಮಾರು 742 ಎಕರೆ ಪ್ರದೇಶದಲ್ಲಿ ವಿಮಾನ ನಿಲ್ದಾಣವನ್ನು ಅಭಿವೃದ್ಧಿಪಡಿಸಲಾಗಿದ್ದು, ದಿನಾಂಕ 22.11.2019ರಂದು ನಾಗರಿಕ ವಿಮಾನಯಾನ ಕಾರ್ಯಾಚರಣೆಯನ್ನು ಪ್ರಾರಂಭಿಸಿದೆ. ಕಲಬುರಗಿಯಿಂದ ಬೆಂಗಳೂರು, ತಿರುಪತಿ, ಹಿಂಡನ್ (ದೆಹಲಿ) ಹಾಗೂ ಮುಂಬೈ ನಗರಗಳಿಗೆ ವಿಮಾನ ಸೇವೆಯನ್ನು ಒದಗಿಸಲಾಗುತ್ತಿದೆ.

### 2. ಬೀದರ್ ಸಿವಿಲ್ ಎನ್‌ಕ್ಲೇವ್:

ಬೀದರ್ ನಲ್ಲಿನ ವಾಯುಪಡೆಗೆ ಸೇರಿದ ವಿಮಾನ ನಿಲ್ದಾಣವನ್ನು ನಾಗರಿಕ ವಿಮಾನಯಾನಕ್ಕೆ ಅನುವಾಗುವಂತೆ ಪ್ರತ್ಯೇಕ ಸಿವಿಲ್ ಎನ್‌ಕ್ಲೇವ್ ಮತ್ತು ಇತರ ಸೌಲಭ್ಯಗಳನ್ನು ರೂ.12.27 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದೆ. ದಿನಾಂಕ 07.02.2020 ರಿಂದ ಕಾರ್ಯಾಚರಣೆಯನ್ನು ಪ್ರಾರಂಭಿಸಲಾಗಿದೆ.

### 3. ಶಿವಮೊಗ್ಗ ವಿಮಾನ ನಿಲ್ದಾಣ:

ಶಿವಮೊಗ್ಗ ವಿಮಾನ ನಿಲ್ದಾಣವು ಶಿವಮೊಗ್ಗ ನಗರದಿಂದ 15 ಕಿ.ಮಿ. ದೂರದಲ್ಲಿರುವ ಸೋಗನೆ ಗ್ರಾಮದಲ್ಲಿ 758 ಎಕರೆ ಭೂಮಿಯಲ್ಲಿ ನಿರ್ಮಾಣಗೊಳ್ಳಲಿದೆ. ಸುಮಾರು ರೂ. 449.22 ಕೋಟಿಗಳ ವೆಚ್ಚದಲ್ಲಿ ಎ-320 ಮಾದರಿಯ ವಿಮಾನಗಳ ಕಾರ್ಯಚರಣೆಗಾಗಿ ಅಭಿವೃದ್ಧಿ ಪಡಿಸಲಾಗುತ್ತಿರುವ ವಿಮಾನ ನಿಲ್ದಾಣದಲ್ಲಿ ಈಗಾಗಲೇ ಪ್ಯಾಕೇಜ್-1 ಕಾಮಗಾರಿಗಳಾದ ರನ್ವೇ, ಎಪ್ರಾನ್, ಟ್ಯಾಕ್ಸಿ-ವೇ, ಆವರಣ ಗೋಡೆ, ಸಂಪರ್ಕ ರಸ್ತೆ ಮತ್ತು ಸುತ್ತಲ ರಸ್ತೆಗಳ ಕಾಮಗಾರಿಗಳನ್ನು ಜೂನ್ 2020ರಿಂದ ಪ್ರಾರಂಭಿಸಿದ್ದು, ಶೇ.92ರಷ್ಟು ಕಾಮಗಾರಿಗಳು ಪೂರ್ಣಗೊಂಡಿದೆ. ಪ್ಯಾಕೇಜ್-2 ಕಾಮಗಾರಿಗಳಾದ ಟರ್ಮಿನಲ್ ಕಟ್ಟಡ, ಎ.ಟಿ.ಸಿ ಕಟ್ಟಡ, ವಿದ್ಯುತ್ ಉಪಕೇಂದ್ರ, ಇತ್ಯಾದಿಗಳನ್ನು ಜೂನ್-2021ರಿಂದ ಪ್ರಾರಂಭಿಸಿದ್ದು, ಶೇ.52ರಷ್ಟು ಕಾಮಗಾರಿಗಳು ಪೂರ್ಣಗೊಂಡಿದೆ. ವಿಮಾನ ನಿಲ್ದಾಣದ ನಿರ್ಮಾಣ ಕಾರ್ಯವು ಡಿಸೆಂಬರ್-2022ಕ್ಕೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ.

### 4. ವಿಜಯಪುರ ವಿಮಾನ ನಿಲ್ದಾಣ:

ವಿಜಯಪುರ ಜಿಲ್ಲೆಯಲ್ಲಿ ಉದ್ದೇಶಿತ ವಿಮಾನ ನಿಲ್ದಾಣವು ವಿಜಯಪುರ ನಗರದಿಂದ 15 ಕಿ.ಮಿ. ದೂರದಲ್ಲಿರುವ ಬುರಾಣಾಪುರ ಮತ್ತು ಮಧುಭಾವಿ ಗ್ರಾಮಗಳಲ್ಲಿ ತಲೆ ಎತ್ತಲಿದೆ. ಇದಕ್ಕಾಗಿ ಈಗಾಗಲೇ ಸುಮಾರು 727 ಎಕರೆ ವಿಸ್ತೀರ್ಣದ ಜಮೀನನ್ನು

ಸ್ವಾಧೀನಪಡಿಸಿಕೊಳ್ಳಲಾಗಿದ್ದು, ಎರಡು ಹಂತಗಳಲ್ಲಿ ರೂ.220.00 ಕೋಟಿಗಳ ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿತ್ತು. ವಿಜಯಪುರ ವಿಮಾನ ನಿಲ್ದಾಣವನ್ನು ಎಟಿಆರ್-72 ಮಾದರಿಯ ವಿಮಾನ ನಿಲ್ದಾಣ ಕಾರ್ಯಾಚರಣೆಯಿಂದ ಏರ್ಬಸ್-320 ಮಾದರಿಯ ವಿಮಾನ ಕಾರ್ಯಾಚರಣೆಗೆ ಅನುವಾಗುವಂತೆ ಮೇಲ್ದರ್ಜೆಗೇರಿಸಲು ಪರಿಷ್ಕರಿಸಿ, ರೂ.347.92 ಕೋಟಿಗಳ (ಪರಿಷ್ಕೃತ ಜಿಎಸ್‌ಟಿ ಸೇರಿ) ಪರಿಷ್ಕೃತ ಅಂದಾಜು ಮೊತ್ತಕ್ಕೆ ಸರ್ಕಾರದ ಆದೇಶ ದಿನಾಂಕ:28.10.2022ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಈ ವಿಮಾನ ನಿಲ್ದಾಣದ ಪ್ಯಾಕೇಜ್-1 ಕಾಮಗಾರಿಗಳಾದ ರನ್ವೇ, ಎಪ್ರಾನ್, ಟ್ಯಾಕ್ಸಿ-ವೇ, ಸಂಪರ್ಕ ರಸ್ತೆ ಮತ್ತು ಸುತ್ತಲ ರಸ್ತೆ ಒಟ್ಟು ರೂ.85.00 ಕೋಟಿ ವೆಚ್ಚಗಳ ಕಾಮಗಾರಿಗಳನ್ನು ಫೆಬ್ರುವರಿ-2021ರಿಂದ ಪ್ರಾರಂಭಿಸಿದ್ದು, ಶೇ.66ರಷ್ಟು ಕಾಮಗಾರಿಗಳು ಪೂರ್ಣಗೊಂಡಿದೆ. ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೇರಿಸುವ ಕಾಮಗಾರಿಗಳು ಸದ್ಯದಲ್ಲೇ ಪ್ರಾರಂಭವಾಗಲಿದೆ. ಪ್ಯಾಕೇಜ್-2&3 ಕಾಮಗಾರಿಗಳಾದ ಟರ್ಮಿನಲ್ ಕಟ್ಟಡ, ಎ.ಟಿ.ಸಿ ಕಟ್ಟಡ, ವಿದ್ಯುತ್ ಉಪಕೇಂದ್ರ, ಇತ್ಯಾದಿಗಳ ಕಾಮಗಾರಿಗಳಿಗೆ ರೂ.125.00 ಕೋಟಿ ಮೊತ್ತ ತಗುಲಲಿದ್ದು, ಶೇ.10ರಷ್ಟು ಕಾಮಗಾರಿಗಳು ಪೂರ್ಣಗೊಂಡಿದೆ. ವಿಮಾನ ನಿಲ್ದಾಣದ ನಿರ್ಮಾಣ ಕಾರ್ಯ ಜುಲೈ-2023ರಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ.

**5. ಹಾಸನ ವಿಮಾನ ನಿಲ್ದಾಣ:**

ಹಾಸನ ವಿಮಾನ ನಿಲ್ದಾಣವು ನಗರದಿಂದ 13 ಕಿ.ಮಿ. ದೂರದಲ್ಲಿರುವ ಬೂವನಹಳ್ಳಿ ಗ್ರಾಮದಲ್ಲಿ ಸುಮಾರು 536 ಎಕರೆ ವಿಸ್ತೀರ್ಣದ ಜಮೀನಲ್ಲಿ ರೂ.193.65 ಕೋಟಿಗಳ ವೆಚ್ಚದಲ್ಲಿ ಎ.ಟಿ.ಆರ್-72 ಮಾದರಿಯ ವಿಮಾನಗಳ ಕಾರ್ಯಚರಣೆಗಾಗಿ ಅಭಿವೃದ್ಧಿ ಪಡಿಸಲು ಉದ್ದೇಶಿಸಲಾಗಿದೆ. ಪ್ಯಾಕೇಜ್-1 ಕಾಮಗಾರಿಗಳಾದ ರನ್ವೇ, ಎಪ್ರಾನ್, ಟ್ಯಾಕ್ಸಿ-ವೇ, ಆವರಣ ಗೋಡೆ, ಸಂಪರ್ಕ ರಸ್ತೆ ಮತ್ತು ಸುತ್ತಲ ರಸ್ತೆಗಳ ಕಾಮಗಾರಿಗಳನ್ನು ರೂ.111.68 ಕೋಟಿ ವೆಚ್ಚದಲ್ಲಿ ಕೈಗೊಳ್ಳಲಾಗುತ್ತಿದೆ. ಕಾಮಗಾರಿಗಳು ಆಗಸ್ಟ್ 2021ರಿಂದ ಪ್ರಾರಂಭಿಸಿದ್ದು, ಶೇ.29ರಷ್ಟು ಕಾಮಗಾರಿಗಳು ಪೂರ್ಣಗೊಂಡಿದೆ. ಕಾಮಗಾರಿಗಳು ಪ್ರಗತಿಯಲ್ಲಿದೆ. ವಿಮಾನ ನಿಲ್ದಾಣದ ನಿರ್ಮಾಣ ಕಾರ್ಯ ಡಿಸೆಂಬರ್-2023ರಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ.

**6. ರಾಯಚೂರು ವಿಮಾನ ನಿಲ್ದಾಣ:**

ಉದ್ದೇಶಿತ ವಿಮಾನ ನಿಲ್ದಾಣವು ರಾಯಚೂರು ನಗರದಿಂದ 12 ಕಿ.ಮಿ. ದೂರದಲ್ಲಿರುವ ಏಗನೂರು ಗ್ರಾಮದಲ್ಲಿ ನಿರ್ಮಾಣಗೊಳ್ಳಲಿದೆ. ಇದಕ್ಕಾಗಿ ಈಗಾಗಲೇ ಸುಮಾರು 320 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಸರ್ಕಾರದ ಆದೇಶ ಸಂಖ್ಯೆ:ಮೂಅಇ 133 ರಾಅವಿ 2020, ದಿನಾಂಕ:07.04.2022ರಲ್ಲಿ ರಾಯಚೂರು ವಿಮಾನ ನಿಲ್ದಾಣದ ಅಭಿವೃದ್ಧಿ ಕಾಮಗಾರಿಗಳಿಗೆ ಮೆ:ರೈಟ್ಸ್ ಸಂಸ್ಥೆಯವರು ಸಲ್ಲಿಸಿರುವ ರೂ.185.57 ಕೋಟಿ ಮೊತ್ತದ ಅಂದಾಜು ವೆಚ್ಚದ ವಿವರವಾದ ವರದಿಗೆ ಹಾಗೂ ಸದರಿ ವಿಮಾನ ನಿಲ್ದಾಣದ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುತ್ತದೆ. ರಾಯಚೂರು ವಿಮಾನ ನಿಲ್ದಾಣಕ್ಕಾಗಿ

ಹೆಚ್ಚುವರಿಯಾಗಿ ಒಟ್ಟು ರೂ.33 ಕೋಟಿ ಅನುದಾನವು (ರೂ.20 ಕೋಟಿ ಕಾಮಗಾರಿಗಾಗಿ ಮತ್ತು 13 ಕೋಟಿ ಮೊತ್ತವು ಭೂ-ಸ್ವಾಧೀನ ಹಾಗೂ ಪುನರ್ವಸತಿಗಾಗಿ) ಅವಶ್ಯಕತೆ ಇರುತ್ತದೆ. ಆದುದರಿಂದ, ರಾಯಚೂರು ವಿಮಾನ ನಿಲ್ದಾಣದ ಕಾಮಗಾರಿಗಳಿಗೆ ಪರಿಷ್ಕೃತ ಮೊತ್ತವಾದ ರೂ.219.00 ಕೋಟಿ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುತ್ತದೆ. ಈ ವಿಮಾನ ನಿಲ್ದಾಣವು ಜೂನ್ 2024ರ ಸಾಲಿನಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ.

**7. ಕಾರವಾರ ಸಿವಿಲ್ ಎನ್‌ಕ್ಲೇವ್:**

ಉತ್ತರ ಕನ್ನಡ ಜಿಲ್ಲೆಯಲ್ಲಿ ನೌಕಪಡೆಯ ಸೀ-ಬರ್ಡ್ ಬೃಹತ್ ಯೋಜನೆಯ ಭಾಗವಾಗಿ ನೌಕಾ ಸೇನೆಯು ರಕ್ಷಣಾ ವಿಮಾನ ನಿಲ್ದಾಣವನ್ನು ಅಭಿವೃದ್ಧಿ ಪಡಿಸುತ್ತಿದ್ದಾರೆ. ಸದರಿ ವಿಮಾನ ನಿಲ್ದಾಣ ಅಂಕೋಲಾ ನಗರದಿಂದ 5 ಕಿ.ಮಿ. ದೂರದಲ್ಲಿರುವ ಭಾವಿಕೇರಿ ಮತ್ತು ಅಲಗೇರಿ ಗ್ರಾಮಗಳಲ್ಲಿದೆ. ಈ ವಿಮಾನ ನಿಲ್ದಾಣದಲ್ಲಿ ನಾಗರೀಕ ವಾಯುಯಾನಕ್ಕಾಗಿ ನೌಕಾಪಡೆಯವರೊಂದಿಗೆ ಕೈಜೋಡಿಸಿ ಪ್ರತ್ಯೇಕ ಸಿವಿಲ್ ಎನ್‌ಕ್ಲೇವ್‌ಅನ್ನು ಅಭಿವೃದ್ಧಿಪಡಿಸಲು ಸರ್ಕಾರ ಉದ್ದೇಶಿಸಿದೆ. ನಾಗರೀಕರ ಉಪಯೋಗಕ್ಕಾಗಿ ಪ್ರತ್ಯೇಕ ಟರ್ಮಿನಲ್ ಕಟ್ಟಡ ಮತ್ತು ಸೌಲಭ್ಯವನ್ನು ಅಭಿವೃದ್ಧಿ ಪಡಿಸಲು ಮತ್ತು ರನ್ವೇಯನ್ನು ವಿಸ್ತರಿಸಲು ಒಟ್ಟು 97.10 ಎಕರೆ ಜಮೀನುಗಳನ್ನು ರೂ.27.84 ಕೋಟಿ ವೆಚ್ಚದಲ್ಲಿ ಭೂ-ಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ. ಸಲಹೆಗಾರರನ್ನು ನೇಮಿಸಲು ನೌಕಾಪಡೆಯೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ. ಈ ವಿಮಾನ ನಿಲ್ದಾಣದ ರೂಪುರೇಷೆ ಮತ್ತು ಸಂಬಂಧಪಟ್ಟ ಅಧ್ಯಯನಗಳು ಪೂರ್ಣಗೊಂಡಿದ್ದು, ನಾಗರೀಕ ವಿಮಾನ ಹಾರಾಟಕ್ಕೆ ಅನುವಾಗುವಂತೆ ರನ್ವೇಯ ವಿಸ್ತರಣಾ ಕಾರ್ಯಗಳು ಮುಂದಿನ ದಿನಗಳಲ್ಲಿ ಪ್ರಾರಂಭವಾಗಲಿದೆ. ಈ ವಿಮಾನ ನಿಲ್ದಾಣವು 2024-25ರ ಸಾಲಿನಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ.

**8. ದಾವಣಗೆರೆ ಮತ್ತು ಕೊಪ್ಪಳ ವಿಮಾನ ನಿಲ್ದಾಣ:**

2022-23ನೇ ಸಾಲಿನ ಆಯವ್ಯಯ ಘೋಷಣೆಯಂತೆ ದಾವಣಗೆರೆ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ವಿಮಾನ ನಿಲ್ದಾಣ ಸ್ಥಾಪಿಸುವ ಕುರಿತು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದಿಂದ ಪೂರ್ವ ಕಾರ್ಯಸಾಧ್ಯತಾ ವರದಿಯನ್ನು ತಯಾರಿಸಲಾಗಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ.

**9. ಚಿಕ್ಕಮಗಳೂರು, ಮಡಿಕೇರಿ ಮತ್ತು ಹಂಪಿಯಲ್ಲಿ ಹೆಲಿಪೋರ್ಟ್ ನಿರ್ಮಾಣ:**

2022-23ನೇ ಸಾಲಿನ ಆಯವ್ಯಯ ಘೋಷಣೆಯಂತೆ ಚಿಕ್ಕಮಗಳೂರು, ಮಡಿಕೇರಿ ಮತ್ತು ಹಂಪಿಯಲ್ಲಿ ಹೆಲಿಪೋರ್ಟ್‌ಗಳನ್ನು ನಿರ್ಮಾಣ ಮಾಡುವ ಕುರಿತು ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲು ಮೆ: ಪವನ ಹನ್ಸ್ ಲಿಮಿಟೆಡ್ (ಭಾರತ ಸರ್ಕಾರದ ಸಂಸ್ಥೆ) ಸಂಸ್ಥೆಯನ್ನು ಕೋರಲಾಗಿದೆ. ವರದಿಯನ್ನು ನಿರೀಕ್ಷಿಸಲಾಗಿದೆ.

## 10. ಮೈಸೂರು ವಿಮಾನ ನಿಲ್ದಾಣದ ವಿಸ್ತರಣೆ ಹಾಗೂ ಉನ್ನತೀಕರಣ:

ಮೈಸೂರು ವಿಮಾನ ನಿಲ್ದಾಣದ ವಿಸ್ತರಣೆ ಹಾಗೂ ಉನ್ನತೀಕರಣದ ಉದ್ದೇಶದಿಂದ ವಿಮಾನ ನಿಲ್ದಾಣ ರನ್‌ವೇಯನ್ನು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದೊಂದಿಗೆ ವಿಸ್ತರಿಸಲು ಹಾಗೂ ವಿಸ್ತರಣೆ ಮತ್ತು ಉನ್ನತೀಕರಣ ಯೋಜನೆಗೆ ಅಗತ್ಯವಿರುವ 240 ಎಕರೆ ಜಮೀನನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಸ್ವಾಧೀನಪಡಿಸಿಕೊಂಡು ಕೆಎಸ್‌ಐಐಡಿಸಿ ರವರನ್ನು ನೋಡಲ್ ಏಜೆನ್ಸಿಯಾಗಿ ನೇಮಿಸಿರುವುರಿಂದ ಕೆಎಸ್‌ಐಐಡಿಸಿ ಮುಖಾಂತರ ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರಕ್ಕೆ ಹಸ್ತಾಂತರಿಸಲು ಅನುಮೋದನೆ ನೀಡಲಾಗಿದೆ. ಯೋಜನೆಗೆ ಅಗತ್ಯವಿರುವ ಒಟ್ಟು 206 ಎಕರೆ 22 1/2 ಗುಂಟೆ ಜಮೀನಿಗೆ ಮಂಡಳಿಯ ಸೇವಾ ಶುಲ್ಕ ಶೇಕಡ 3ರಂತೆ ಒಟ್ಟು ರೂ.319,13,90,625/-ಗಳಷ್ಟು ಮೊತ್ತವನ್ನು ಮಾತ್ರ ಭರಿಸಲು ಸರ್ಕಾರದ ಆದೇಶ ದಿನಾಂಕ:16.04.2022ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

## 11. ಬೆಂಗಳೂರು ಸಿಗ್ನೇಚರ್ ಬಿಸೆನೆಸ್ ಪಾರ್ಕ್ (Bangalore Signature Business Park):

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹೊಂದಿಕೊಂಡಿರುವ 407 ಎಕರೆ ಸರ್ಕಾರಿ ಜಮೀನಿನಲ್ಲಿ ಬೆಂಗಳೂರು ಸಿಗ್ನೇಚರ್ ಬಿಸ್‌ನೆಸ್ ಪಾರ್ಕ್ (BSBP) ಯೋಜನೆಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಈಗಾಗಲೇ ಸಿದ್ಧಪಡಿಸಿರುವ ಮಾರುಕಟ್ಟೆ ಅಧ್ಯಯನದ ಆಧಾರದ ಮೇಲೆ ಮಾಸ್ಟರ್ ಯೋಜನೆ ಮತ್ತು ವ್ಯವಹಾರ ಯೋಜನೆಗಳಿಗೆ ಮೊದಲ ಹಂತದ ಟ್ರಂಕ್ ಮೂಲಸೌಲಭ್ಯ ಅಭಿವೃದ್ಧಿಪಡಿಸಲು (ಸುಮಾರು ರೂ.212 ಕೋಟಿಗಳಲ್ಲಿ) ಮೊದಲ ಹಂತದ ಪ್ಯಾಕೇಜ್-1 ಕಾಮಗಾರಿಗಳಾದ ರಸ್ತೆ, ಒಳಚರಂಡಿ, ವಿದ್ಯುತ್, ಕುಡಿಯುವ ನೀರು ಸರಬರಾಜು ಮತ್ತು ಇತ್ಯಾದಿಗಳನ್ನು ಕೈಗೊಳ್ಳಲು ಗುತ್ತಿಗೆದಾರರನ್ನು ನೇಮಿಸಲಾಗಿರುತ್ತದೆ. BSBP ಸ್ಥಳಕ್ಕೆ ತಲುಪಲು ಸಂಪರ್ಕ ಮೇಲುಸೇತುವೆಯನ್ನು (ಸುಮಾರು ರೂ.140 ಕೋಟಿಗಳಲ್ಲಿ) ನಿರ್ಮಿಸುವ ಕಾಮಗಾರಿಯನ್ನು ಕೆ.ಎಸ್.ಐ.ಐ.ಡಿ.ಸಿ.ಯು ಕೈಗೆತ್ತಿಕೊಂಡಿದೆ.